ಶ್ರೀ ಎನ್. ಸಂಪಂಗಿ: ಚಿಕ್ಕಬಳ್ಳಾಪುರದಲ್ಲಿ ಇದುವರೆಗೂ ಎಷ್ಟು ಶಾದಿ ಮಹಲ್‌ಗಳನ್ನು ಕೊಟ್ಟಿದ್ದಾರೆಂಬ ವಿವರಗಳು ಬೇಕಲ್ಲ. ಶಾದಿ ಮಹಲ್ ಕಾರ್ಯಕ್ರಮ ಕಳೆದ 2–3 ವರ್ಷಗಳಿಂದ ಬರುತ್ತಿದೆ. ಇದುವರೆಗೂ ಎಷ್ಟು ಶಾದಿ ಮಹಲ್‌ಗಳನ್ನು ಕೊಟ್ಟಿದ್ದೀರೆಂಬ ವಿವರಗಳಾದರೂ ಬೇಕಲ್ಲವೇ?

ಅಧ್ಯಕ್ಷರು: ಈಗ ಅವರು ಕೇಳಿದ್ದು ಗೌರಿಬಿದನೂರಿಗೆ ಸಂಬಂಧಿಸಿದ್ದು.

ಶ್ರೀ ಎನ್. ಸಂಪಂಗಿ: ಗೌರಿಬಿದನೂರು ಅಲ್ಲ, ಶಾದಿ ಮಹಲ್‌ಗಳನ್ನು ಎಷ್ಟು ಕೊಟ್ಟಿದ್ದಾರೆಂಬ ಮಾಹಿತಿ ಬೇಕಲ್ಲ.

ಅಧ್ಯಕ್ಷರು: ತಾವು ಪ್ರತ್ಯೇಕ ಪ್ರಶ್ನೆ ಕೇಳಿ.

ಇಂಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಣ್ಣಿನ ಬಗ್ಗೆ ಲೆನ್ಸ ಅಳವಡಿಸುವ ಉಪಕರಣ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ?

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**122 (462)**
ಸದಸ್ಯರ ಹೆಸರು	:	**ಶ್ರೀ. ಡಾ: ಬಗಲಿ ಸಾರ್ವಭೌಮ ಸಠಗೌಡ (ಇಂಡಿ)**
ಉತ್ತರಿಸುವ ಸಚಿವರು	:	**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಇಂಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಣ್ಣಿನ ಲೆನ್ಸ್ ಅಳವಡಿಸುವ ಉಪಕರಣ (ಆಪರೇಟಿಂಗ್ ಮೈಕ್ರೋಸ್ಕೋಪ್) ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಇಂತಹ ಉಪಕರಣವನ್ನು ಸಾರ್ವಜನಿಕ ಆಸ್ಪತ್ರೆಗೆ ಪೂರೈಸುವ ಯೋಜನೆ ಸರ್ಕಾರದ ಮುಂದೆ ಇದೆಯೇ:

ಸಾರ್ವಜನಿಕ ಆಸ್ಪತ್ರೆ, ಮುದ್ದೆಬಿಹಾಳ್‌ನಲ್ಲಿದ್ದ ಸದರಿ ಉಪಕರಣವನ್ನು ಸಾರ್ವಜನಿಕ ಆಸ್ಪತ್ರೆ, ಇಂಡಿ ಇಲ್ಲಿಗೆ ನೀಡಲಾಗಿದೆ.

ಇ) ಇದ್ದಲ್ಲಿ ಯಾವ ಅವಧಿಯೊಳಗೆ ಈ ಉಪಕರಣವನ್ನು ಪೂರೈಸಲಾಗುವುದು ವಿವರ ನೀಡುವುದು;

ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಸುಮಾರು 11 ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಕಣ್ಣಿನ ಲೆನ್ಸ್ ಅಳವಡಿಸುವ

ಉಪಕರಣ (ಆಪರೀಟಿಂಗ್ ಮೈಕ್ರೋಸ್ಕೋಪ್)ವನ್ನು ಪೂರೈಸುವ ಯೋಜನೆ ಕೈಗೊಂಡಿದೆ.

ಈ) ಇಂತಹ ಯೋಜನೆ ಇಲ್ಲದಿದ್ದಲ್ಲಿ, ಸಾರ್ವಜನಿಕ ಹಿತದೃಷ್ಟಿಯಿಂದ ಈ ಉಪಕರಣವನ್ನು ಪೂರೈಸಲು ಸರ್ಕಾರದವರು ಅಗತ್ಯ ಕ್ರಮ ಕೈಗೊಳ್ಳುವರೆ?

ಉದ್ಭವಿಸುವುದಿಲ್ಲ.

ಡಾ: ಬಗಲಿ ಸಾರ್ವಭೌಮ ಸತಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಇಂಡಿ ಸಾರ್ವಜನಿಕ ಆಸ್ಪತ್ರೆಗೆ ಕಣ್ಣಿನ ಲೆನ್ಸ್ ಆಳವಡಿಸುವ ಉಪಕರಣ (Operating Microscope) ಪೂರೈಸಿದ್ದಕ್ಕಾಗಿ ನಾನು ಅವರಿಗೆ ಮೊದಲನೆಯದಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ Microscope ತಾತ್ಪೂರ್ತಿಕವಾಗಿ ಪೂರೈಸಲಾಗಿದೆ. ಮಾನ್ಯ ಮಂತ್ರಿಗಳು ಮುಂದುವರೆದು ಹೇಳಿದ್ದಾರೆ: ರಾಷ್ಟ್ರೀಯ ಅಂಧತ್ವ ನಿವಾರಣ ಕಾರ್ಯಕ್ರಮದಡಿಯಲ್ಲಿ ಸುಮಾರು 11 ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಅಳವಡಿಸುವ Microscope ಅನ್ನು ಪೂರೈಸುವ ಯೋಜನೆ ಕೈಗೊಂಡಿದೆ. ಈ ಯೋಜನೆಯಡಿಯಲ್ಲಿ ಇಂಡಿ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಪರ್ಮನೆಂಟಾಗಿ ಒಂದು microscope ಅನ್ನು ಒದಗಿಸಿಕೊಡಬೇಕೆಂದು ನಾನು ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಮುಂದುವರೆದು, ಬಹುತೇಕ ತಾಲ್ಲೂಕು ಆಸ್ಪತ್ರೆಗಳಲ್ಲಿ ಈ Operating Microscope ಉಪಕರಣ ಇಲ್ಲದ ಕಾರಣ ನಾವು ರೋಗಿಗಳನ್ನು ಜಿಲ್ಲಾ ಆಸ್ಪತ್ರೆಗಳಿಗೆ ಕಳುಹಿಸಿಕೊಡಬೇಕಾಗುತ್ತದೆ. ಆದುದರಿಂದ, ದಯವಿಟ್ಟು ಮಾನ್ಯ ಮಂತ್ರಿಗಳು ಹೆಚ್ಚಿನ ಸಂಖ್ಯೆಯಲ್ಲಿ Operating Microscope ಉಪಕರಣಗಳನ್ನು ಪಡೆದು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿರುವ ಆಸ್ಪತ್ರೆಗಳಿಗೆ ಪೂರೈಸಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಸದಸ್ಯರು ನೀಡಿರುವ ಸಲಹೆಗಳೆಲ್ಲವನ್ನೂ ಒಪ್ಪಿಕೊಂಡು ಜಾರಿಗೆ ತರಲು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ವಿದ್ಯಾರ್ಥಿ ನಿಲಯಗಳ ವಿವರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**123(527)**
ಸದಸ್ಯರ ಹೆಸರು	:	**ಶ್ರೀ ಗೋಪಾಲ ಭಂಡಾರಿ ಹೆಚ್.**